2. ಮಡಿಕೇರಿ

ಬಳ್ಳಾರಿ ಜಿಲ್ಲೆ

1. ಹಡಗಲಿ
2. ಹರಪನಹಳ್ಳಿ
3. ಸೊಂಡೂರು

ರಾಯಚೂರು ಜಿಲ್ಲೆ

1. ಕೊಪ್ಪಳ
2. ಲಿಂಗಸೂಗೂರು.
7. ಸೂಪ

ಧಾರವಾಡ ಜಿಲ್ಲೆ

1. ಬ್ಯಾಡಗಿ
2. ಗದಗ್
3. ಹುಕ್ಕೇರಿ
4. ಹುಬ್ಬಳ್ಳಿ
5. ಕಲಘಟಗಿ
6. ಮುಂಡಗಿ
7. ನವಲಗುಂದ್
8. ರಾಣಿಬೆನ್ನೂರು.

ವಿಷಯ:- ಹೊಸಕೋಟೆ ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 483 (1056)

ಶ್ರೀ ಜಿ.ಶಂಕರಗೌಡ (ಹೊಸಕೋಟೆ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆ ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದು ಕೊರತೆಯನ್ನು ತುಂಬಲು ಸರ್ಕಾರದವರು ಕೂಡಲೇ ಶಿಕ್ಷಕರನ್ನು ನೇಮಿಸಲು ಕ್ರಮ ಕೈಗೊಳ್ಳುವರೇ; ತೆಲುಗು, ತಮಿಳು, ಹಾಗೂ ಉರ್ದು ಶಿಕ್ಷಣದ ಕೆಲವು ಶಾಲೆಗಳಲ್ಲಿನ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗಿದ್ದು ಈ ಶಿಕ್ಷಕರನ್ನು ನೇಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಹೊಸಪೇಟೆ ತಾಲ್ಲೂಕಿನ ಶಾಲೆಗಳನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬಲು ಸರ್ಕಾರದ ಕ್ರಮ ಕೈಗೊಂಡಿದೆ. ನೇಮಕಾತಿ ಪ್ರಕ್ರಿಯೆಗಳು ಈಗಾಗಲೇ ಪ್ರಾರಂಭವಾಗಿವೆ. ಪ್ರೌಢ ಶಾಲೆಗಳು ಹಾಗೂ ಪ್ರಾಥಮಿಕ ಶಾಲೆಗಳಿಗೆ ಕ್ರಮವಾಗಿ ಆಗಸ್ಟ್ ಮತ್ತು ಸೆಪ್ಟೆಂಬರ್ ಅಂತ್ಯಕ್ಕೆ ನೇಮಕಾತಿ ಪ್ರಕ್ರಿಯೆ ಮುಗಿಸಲಾಗುವುದು. ಸದರಿ ನೇಮಕಾತಿಯಲ್ಲಿ ಇತರೆ ಶಿಕ್ಷಕರೊಂದಿಗೆ ತೆಲುಗು, ತಮಿಳು ಹಾಗೂ ಉರ್ದು ಶಿಕ್ಷಕರನ್ನು ಸಹ ನೇಮಕಾತಿ ಮಾಡಲಾಗುವುದು.